

# ಗಂಟೆಯ ಮೋಹ

ಈ ಚಿತ್ರವನ್ನೊಮ್ಮೆ ನೋಡಿ. ಗೋಡೆ, ಟೇಬಲ್, ಡೆಸ್ಕ್ ಮೇಲಿನ ಇಂಚಿಂಚು ಜಾಗವೂ ಗಡಿಯಾರಮಯ. ಇಲ್ಲಿ ಬರೋಬ್ಬರಿ 1500 ಗಡಿಯಾರಗಳಿವೆ! ಈ ಗಡಿಯಾರದ ಸಂಗ್ರಹಕಾರ ಅರವತ್ತಾರು ವರ್ಷದ ಜಾಕ್ ಸ್ಕಾಫ್. ಅತೀ ಹೆಚ್ಚು ಗಡಿಯಾರಗಳ ಸಂಗ್ರಹಕಾರನೆಂಬ ಗಿನ್ನಿಸ್ ವಿಶ್ವದಾಖಲೆಯು ಈತನ ಮುಡಿಗೇರಿದೆ.

ಅಮೆರಿಕದ ನಾರ್ತ್ ಬರ್ವಿಕ್‌ನಲ್ಲಿರುವ ಈತನ ಮನೆಯ ಬಾಗಿಲಿನಲ್ಲಿ ತೂಗು ಹಾಕಿರುವ ಗಡಿಯಾರವನ್ನು ನೋಡುತ್ತ ಒಳಗಡೆ ಕಾಲಿಡುವ ಪ್ರತಿಯೊಬ್ಬರ ಬಾಯಲ್ಲೂ 'ವಾಹ್' ಎನ್ನುವ ಉದ್ಗಾರ ಹೊರಹೊಮ್ಮುವುದು ಖಂಡಿತ.

ಪೋರ್ಟ್ಸ್ ಮೌತ್ ನೇವಲ್ ಶಿಪ್ ಯಾರ್ಡ್ ನಲ್ಲಿ ಕೊಳಾಯಿ ಜೋಡಿಸುವ ಕೆಲಸ ಮಾಡುತ್ತಿದ್ದ, ಈತನ ಈ ಹವ್ಯಾಸ ಆರಂಭವಾಗಿದ್ದು ಏಳೆಂಟು ವರ್ಷಗಳ ಹಿಂದೆ. ಒಮ್ಮೆ ಅನಾರೋಗ್ಯದ ನಿಮಿತ್ತ ರಜಾ ಹಾಕಬೇಕಾಗಿ ಬಂತಂತೆ, ಆ ಸಮಯದಲ್ಲಿ ಆಲಸಿಯಾಗಿ ಸಮಯ ವ್ಯರ್ಥ ಮಾಡಲು ಮನಸ್ಸಾಗದೆ ಕಾಲ ಸೂಚಕ ಯಂತ್ರಗಳ ರಿಪೇರಿ ಮಾಡಲು ಆಲೋಚಿಸಿದ. ಗೆಳೆಯನ ಜೊತೆಗೂಡಿ ಬೇರೆ ಊರುಗಳ ಗುಜರಿ ಅಂಗಡಿಗಳಲ್ಲಿ ಮಾರಾಟಕ್ಕಿದ ಹಳೇ ಗಡಿಯಾರವನ್ನು ಕೊಂಡುಕೊಳ್ಳಲು ಪ್ರಾರಂಭಿಸಿದನಂತೆ. ಈತನ ಗಡಿಯಾರ ರಿಪೇರಿಯ ವಿಚಿತ್ರ ಹವ್ಯಾಸದ ಕುರಿತು ಸುದ್ದಿ ತಿಳಿದ ಅನೇಕ ಜನ ತಮ್ಮ ಕೆಟ್ಟುಹೋಗಿರುವ ಗಡಿಯಾರವನ್ನು ಈತನ ಮನೆ ಬಾಗಿಲ ಮುಂದಿಟ್ಟು ಹೋಗುತ್ತಿದ್ದರಂತೆ. ಹೀಗಾಗಿ ಎಷ್ಟೋ ಗಡಿಯಾರಗಳು ಎಲ್ಲಿಂದ ಬಂದಿವೆಯೆಂದು ಈತನಿಗೇ ಗೊತ್ತಿಲ್ಲ.

ಜಾಕ್‌ನ ಈ ಹವ್ಯಾಸ ಮುಂದೊಂದು ದಿನ ತನಗೆ ಕೀರ್ತಿ ತಂದು ಕೊಡುತ್ತದೆ ಎಂಬುದು ಈತನಿಗೆ ಗೊತ್ತಿರಲಿಲ್ಲವಂತೆ. ಒಮ್ಮೆ ಈತನ



ಮೊಮ್ಮಗಳು ಗಿನ್ನಿಸ್ ಬುಕ್ ಅನ್ನು ತಂದು ಕೊಟ್ಟಳಂತೆ. ಅದರಲ್ಲಿ ಈವರೆಗೂ 921 ಗಡಿಯಾರವನ್ನು ಸಂಗ್ರಹಿಸಿದ್ದ ದಾಖಲೆಯು ಜರ್ಮನಿಯನೊಬ್ಬನ ಹೆಸರಲ್ಲಿತ್ತಂತೆ. ಈ ದಾಖಲೆಯನ್ನು ಮುರಿಯಬೇಕೆಂದು ಆಕೆ ಅಜ್ಜನಿಗೆ ಹುರಿದುಂಬಿಸಿದಳು. ಆಗ ಈತ 900 ಗಡಿಯಾರವನ್ನು ಮಾತ್ರ ಹೊಂದಿದ್ದ. 2008ರಲ್ಲಿ 1094 ವಿವಿಧ ಬಗೆಯ ಗಡಿಯಾರವನ್ನು ಸಂಗ್ರಹಿಸಿ ವಿಶ್ವ ದಾಖಲೆ ಮಾಡಿದ್ದಾನೆ. ಈಗ 1509 ಗಡಿಯಾರಗಳನ್ನು ಹೊಂದಿರುವ ಈತನ ಪುಟ್ಟ ಅಪಾರ್ಟ್‌ಮೆಂಟ್ ಪ್ರವಾಸಿಗರ ಆಕರ್ಷಣೆಯ ಸ್ಥಳವಾಗಿದೆ.

■ ವಿದ್ಯಾ ವಿ ಹಾಲಬಾವಿ